# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
## ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

## ಅಪರಾದ ಪ್ರಕರಣ ಸಂಖ್ಯೆ 785/2017

**ಚಾಸಾಃ 4 ಪ್ರಾಸಾಃ 4**

| | |
|---|---|
| ಹೆಸರು | : ಪ್ರಮೀಳಾ ಡಿಸೋಜಾ |
| ಗಂಡನ ಹೆಸರು | : ಜೋನ್ ಫರ್ನಾಂಡಿಸ್ |
| ಪ್ರಾಯ | : 44 ವರ್ಷ |
| ಉದ್ಯೋಗ | : ಗುಮಾಸ್ತೆ, ಸೈಂಟ್ ಪೀಟರ್ ಆಂಗ್ಲ ಮಾಧ್ಯಮ ಶಾಲೆ ಅಳದಂಗಡಿ |
| ವಾಸ | : ಅಳದಂಗಡಿ ಗ್ರಾಮ, ಬೆಳ್ತಂಗಡಿ ತಾಲೂಕು |

ದಿನಾಂಕ 29-5-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಸೈಂಟ್ ಪೀಟರ್ ಕ್ಲೇವರ್ ಆಂಗ್ಲ ಮಾಧ್ಯಮ ಶಾಲೆ ಅಳದಂಗಡಿ ಇಲ್ಲಿ ಕಳೆದ 8 ವರ್ಷಗಳಿಂದ ಗುಮಾಸ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಿನಾಂಕ 23-5-2017 ರಂದು ಸಂಜೆ 4-30 ಗಂಟೆ ವರೆಗೆ ನಾವು ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿ ಮನೆಗೆ ಹೋಗಿದ್ದು ಮಾರನೇ ದಿನ ಬೆಳಗ್ಗೆ 8-30 ಗಂಟೆಗೆ ಮತ್ತೆ ಶಾಲೆಗೆ ಬಂದಾಗ ಗೇಟ್ ತೆರೆದಿದ್ದು ಕಛೇರಿಯ ಬಾಗಿಲು ಕೂಡ ತೆರೆದಿತ್ತು. ಆ ಸಮಯ ನನ್ನ ಜೊತೆ ಚಾಸಾ-2 ಮತ್ತು 5 ರವರೂ ಸಹ ಇದ್ದು ಕೂಡಲೇ ನಾವು ಈ ವಿಚಾರವನ್ನು ಚಾಸಾ-1 ಮತ್ತು 3 ರವರಿಗೆ ತಿಳಿಸಿರುತ್ತೇವೆ. ನಾವು ಕಛೇರಿಯ ಒಳಗೆ ಹೋಗಿ ನೋಡಲಾಗಿ ಅಲ್ಲಿದ್ದ ಕಬೊರ್ಡ್ ಗಳನ್ನು ಯಾರೋ ಹೊಡೆದಿದ್ದು ಮುಖ್ಯ ಶಿಕ್ಷಕರ ಕೊಠಡಿಯ ಡ್ರಾವರ್ ನಲ್ಲಿದ್ದ ರೂ. 8,000 ಗಳನ್ನು ಮತ್ತು ಕಬೋರ್ಡ್ ನಲ್ಲಿದ್ದ ರೂ. 38,000 ಕಳುವಾಗಿತ್ತು ಮತ್ತು ಕಛೇರಿಯಲ್ಲಿದ್ದ ಕಬೋಡ್ ಗಳನ್ನು ತೆರೆದು ಅಲ್ಲಿದ್ದ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು. ನಂತರ ಚಾಸಾ-1 ರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ನಂತರ ದಿನಾಂಕ 24-5-2017 ರಂದು ಪೊಲೀಸರು ಶಾಲೆಯ ಕಛೇರಿಗೆ ಬಂದಿದ್ದು ಚಾಸಾ-1 ರವರು ತೋರಿಸಿಕೊಟ್ಟಂತೆ ನಿಪಿ-2 ರಂತೆ ಮಹಜರ್ ಮಾಡಿ 1 ಬೀಗವನ್ನು ಅಮಾನತುಪಡಿಸಿಕೊಂಡಿರೂತ್ತರೆ. ನಿಪಿ-2 ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಂತರ ದಿನಾಂಕ 29-7-2017 ರಂದು ಪೊಲೀಸರು 1 ನೇ ಆರೋಪಿಯನ್ನು ನಮ್ಮ ಶಾಲೆಗೆ ಕರೆದುಕೊಂಡು ಬಂದಿದ್ದು ಆ

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-3.pdf

ಸಮಯ ನಾನು ಶಾಲೆಯಲ್ಲಿದ್ದು 1 ನೇ ಆರೋಪಿಯನ್ನು ನೋಡಿರುತ್ತೇನೆ. ಸಾಕ್ಷಿಯು ಈ ದಿನ ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿದ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯು 2 ನೇ ಆರೋಪಿಯೊಂದಿಗೆ ಸೇರಿ ಕಳ್ಳತನ ಮಾಡಿರುವುದಾಗಿ 1 ನೇ ಆರೋಪಿ ತಿಳಿಸಿರುತ್ತಾರೆ. ಕಳುವಾಗಿ ಒಟ್ಟು 46000 ರೂ ಗಳಲ್ಲಿ ರೂ. 5000 ಗಳು ಸಿಕ್ಕಿರುತ್ತದೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ. ನಿಪಿ-2 ರಂತೆ ಅಮಾನತುಪಡಿಸಿಕೊಂಡ ಬೀಗವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಬೀಗವನ್ನು ಈಗಾಗಲೇ ಎಂಒ-1 ಎಂದು ಗುರುತಿಸಲಾಗಿರುತ್ತದೆ. 500 ಮುಖ ಬೆಲೆಯ 10 ನೋಟುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-2 ರಿಂದ 11 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಪಿ ಎಂ ವಕೀಲರಿಂದಃ</u>

ಶಾಲೆಯ ಹಣದ ವ್ಯವಹಾರನ್ನು ನಾನೇ ನೋಡಿಕೊಳ್ಳುತ್ತಿದ್ದೆ, ಹಣವನ್ನು ನಾನು ಸಂಗ್ರಹಿಸಿ ಚಾಸಾ-3 ರವರಿಗೆ ನೀಡುತ್ತಿದ್ದೆ. ಹಣ ಪಡೆದುಕೊಳ್ಳುವ ಸಂದರ್ಭದಲ್ಲಿ ನೋಟುಗಳು ಕ್ರಮ ಸಂಖ್ಯೆ ನಮೂದು ಮಾಡಿಕೊಳ್ಳುತ್ತಿರಲಿಲ್ಲ ಪ್ರಥಮ ಭಾರಿಗೆ ನಾನು ಮತ್ತು ಚಾಸಾ-2 ಮತ್ತು 5 ರವರು ಬೆಳಗ್ಗೆ ಶಾಲೆಗೆ ಬಂದಿರುತ್ತೇವೆ. ಈ ವಿಚಾರವನ್ನು ಪೊಲೀಸರಿಗೆ ಹೇಳಿಕೆ ನೀಡುವ ಸಂದರ್ಭ ಹೇಳಿರುತ್ತೇನೆ. ಹಣದ ಕಳ್ಳತನ ಶಾಲೆಯ ಪ್ರಾಂಶುಪಾಲರ ಕಛೇರಿಯಲ್ಲಿ ನಡೆದಿರುತ್ತದೆ, ಆಡಳಿತ ಕಛೇರಿಯಲ್ಲೂ ಕೂಡ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು. ಆಡಳಿತ ಕಛೇರಿ ಮತ್ತು ಪ್ರಾಂಶುಪಾಲರ ಕಛೇರಿಯ ಮುಖ್ಯ ಬಾಗಿಲು ಪೂರ್ವ ದಿಕ್ಕಿಗೆ ಇರುತ್ತದೆ. ಆಡಳಿತ ಕಛೇರಿ ಮತ್ತು ಪ್ರಾಂಶುಪಾಲರ ಕಛೇರಿಯ ಬಾಗಿಲುಗಳಿಗೆ ಪ್ರತ್ಯೇಕವಾಗಿ ಬೀಗವನ್ನು ಹಾಕಲಾಗುತ್ತಿತ್ತು. ಅದರಲ್ಲಿ ಆಡಳಿತ ಕಛೇರಿಯ ಬಾಗಿಲ ಬೀಗವನ್ನು ಮಾತ್ರ ಹೊಡೆದು ಹಾಕಲಾಗಿತ್ತು. ಎಂಒ-1 ಅಲ್ಯೂಮೀನಿಯಂ ಬೀಗವಾಗಿತ್ತು. ಸದರಿ ಬೀಗಕ್ಕೆ ಕೊಂಡಿ ಇತ್ತು. ಪೊಲೀಸರು ಸ್ಥಳಕ್ಕೆ ಬಂದಾಗ ಎಂಒ-1 ಬೀಗ ಮತ್ತು ಕೊಂಡಿ ಪ್ರತ್ಯೇಕವಾಗಿ ಬಿದ್ದಿದ್ದವು. ಬೀಗ ಮತ್ತು ಕೊಂಡಿಯನ್ನು ಪೊಲೀಸರು ವಶಪಸಿಡಿಕೊಂಡಿರುವ ಬಗ್ಗೆ ಗೊತ್ತಿರುವುದಿಲ್ಲ. ಪೊಲೀಸರು ಸ್ಥಳದಲ್ಲಿ ಬೀಗವನ್ನು ಮಾತ್ರ ಅಮಾನತುಪಡಿಸಿಕೊಂಡಿರುತ್ತಾರೆ ಪೊಲೀಸರು ತಕ್ಷೀರು ಸ್ಥಳಕ್ಕೆ ಅಂದಾಜು 3 ಬಾರಿ ಬಂದಿರುತ್ತಾರೆ. ಪೊಲೀಸರು ಪ್ರಥಮ ಬಾರಿಗೆ ಶಾಲೆಗೆ ಬಂದಾಗ ನಾನು ನಿಪಿ-2 ಕ್ಕೆ ಸಹಿಯನ್ನು ಹಾಕಿರುತ್ತೇನೆ. ದೂರು ನೀಡಿದ ಎಷ್ಟು ಸಮಯದ

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-3.pdf

www.ecourtsindia.com

ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆಂದು ನೆನಪಿರುವುದಿಲ್ಲ. ಪೊಲೀಸರು ಸ್ಥಳಕ್ಕೆ ಬಂದಾಗ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಇದ್ದ ಬಗ್ಗೆ ನೆನಪಿರುವುದಿಲ್ಲ, ಅದರೆ ಚಾಸಾ-1, 3, ನಾನು ಮತ್ತು ಇಬ್ಬರು ಕಛೇರಿ ಸಿಬ್ಬಂಧಿಗಳು ಇದ್ದೆವು. ನಿಪಿ-2 ಕ್ಕೆ ಚಾಸಾ-1, 2 ಮತ್ತು 5 ಮತ್ತು ನಾನು ಸಹಿ ಮಾಡಿರುತ್ತೇವೆ.

ಸ್ಥಳಕ್ಕೆ ಬಂದ ಪೊಲೀಸರು ಬರವಣಿಗೆ ಮಾಡಿದ್ದನ್ನು ಹೊರತುಪಡಿಸಿ ಬೇರೆನು ಮಾಡಿರುವುದಿಲ್ಲ. ಪೊಲೀಸರು ಸ್ಥಳಕ್ಕೆ ಬರುವಾಗ ಲ್ಯಾಪ್ ಟಾಪ್ ತಂದ ಬಗ್ಗೆ ನೆನಪಿರುವುದಿಲ್ಲ. ನಿಪಿ-2 ನ್ನು ಬೆರಳಚ್ಚು ಮಾಡಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಠಾಣೆಗೆ ಹೋಗಿರುವುದಿಲ್ಲ. 1 ನೇ ಆರೋಪಿಯನ್ನು ಸ್ಥಳಕ್ಕೆ ಕರೆದುಕೊಂಡು ಬಂದ ಸಮಯ ಪೊಲೀಸರು ಯಾವುದಾದರೂ ವಸ್ತುಗಳನ್ನು ತೋರಿಸಿದ ಬಗ್ಗೆ ನೆನಪಿರುವುದಿಲ್ಲ. ಪೊಲೀಸರು ಹೇಳಿದ ಮೇರೆಗೆ ಆರೋಪಿಗಳೇ ಕಳ್ಳತನ ಮಾಡಿರುವುದಾಗಿ ಹೇಳುತ್ತಿದ್ದೇನೆ ಎಂದರೆ ಸರಿ. ಹೇಳಿಕೆ ಪಡೆಯುವ ಪೂರ್ವದಲ್ಲಿ ಪೊಲೀಸರು ನನಗೆ ನೋಟಿಸ್ ನೀಡಿರುವುದಿಲ್ಲ. ಎಂಒ-2 ರಿಂದ 11 ನಮ್ಮ ಶಾಲೆಯಿಂದ ಕಳುವಾದ ನೋಟುಗಳು ಎಂದು ಹೇಳಲು ನೋಟುಗಳ ಕ್ರಮಸಂಖ್ಯೆ ಮತ್ತು ಯಾವುದೇ ಗುರುತುಗಳನ್ನು ಮಾಡಿಕೊಂಡಿರುವುದಿಲ್ಲ . ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನಿಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕೆ ಬಂದಿರುವುದಿಲ್ಲ ಮಹಜರ್ ಮಾಡಿರುವುದಿಲ್ಲ, ಈಣೆಯಲ್ಲಿ ತಯಾರು ಮಾಡಿದ ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಂಒ-1 ರಿಂದ 11 ಕ್ಕು ಆರೋಪಿಗಳಿಗುಾ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪತ್ತೆಯಾಗದ ಪ್ರಕರಣದಲ್ಲಿ ಪೊಲೀಸರು ಆರೋಪಿಗಳ ವಿರುದ್ದ ಸಲ್ಲಿಸಿದ್ದ ಸುಳ್ಳು ದೋಷಾರೋಪಣಾ ಪಟ್ಟಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆಳರಚ್ಚು ಮಾಡಲಾಯಿತು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

**(ಸಾ. ಓ. ಹೇ. ಕೇ. ಸ. ಇ. ಎ. ಒ.)**

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-3.pdf